ಪಿಡಬ್ಲ್ಯೂ3 ಓ.ಎಸ್.ನಂ.243/2017

ದಿನಾಂಕಃ 07-09-2021 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಟಿ ಎನ್ ಎಸ್ ವಕೀಲರಿಂದ

ನಾನು 1966 ರಿಂದ 2005 ರವರೆಗೆ ಇಸ್ರೋದಲ್ಲಿ ಇಂಜನಿಯರಿಂಗ್ ನಲ್ಲಿ ಕೆಲಸ ಮಾಡಿರುತ್ತೇನೆ. 1966 ರಿಂದ 1974 ರವೆರೆಗ ನಾಗ್ ಪುರದಲ್ಲಿ ಕೆಲಸ ಮಾಡಿರುತ್ತೇನೆ. ಆ ನಂತರ ನನಗೆ ಇಸ್ರೋ ದಲ್ಲಿ ಕೆಲಸ ಆಯಿತು. ಅಹಮದಾಬಾದ್ ನಲ್ಲಿ 1974 ರಿಂದ 8 ವರ್ಷಗಳ ಕಾಲ ಕೆಲಸ ಮಾಡಿರುತ್ತೇನೆ.

ನನಗೆ 1966 ರಿಂದಲೂ ವೆಂಕಟೇಶ್ ಪರಿಚಯ ಇದ್ದು ವೆಂಕಟೇಶ್ ರವರ ತಂದೆ ಊರು ಲಕ್ಷ್ಮೀಸಾಗರ ನನ್ನದು ಆ ಊರಿನ ಪಕ್ಕದ ಬೇವಹಳ್ಳಿ ಗ್ರಾಮ. ನಾನು ಚಿಂತಾಮಣಿಯಲ್ಲಿ 1962 ರಿಂದ 1965 ರ ವರೆಗೆ ಚಿಂತಾಮಣಿಯ ಕಾಲೇಜಿನಲ್ಲಿ ಡಿಪ್ಲೊಮೋ ಮಾಡಿದ್ದೇನೆ. ನಾನು 1965 ರಿಂದ ಇದುವರೆಗೆ ಚಿಂತಾಮಣಿಗೆ 2-3 ಬಾರಿ ಬಂದಿರುತ್ತೇನೆ ಯಾವ ವರ್ಷ ನೆನಪಿಲ್ಲ. ನನಗೆ ಶ್ರೀನಿವಾಸಯ್ಯನವರು 1963 ರಲ್ಲಿ ಪರಿಚಯ. ಶ್ರೀನಿವಾಸಯ್ಯನವರು ತಂದೆ ಊರು ಲಕ್ಷ್ಮೀಸಾಗರ ಆಗಿನಿಂದ ಪರಿಚಯ. ಶ್ರೀನಿವಾಸಯ್ಯನ ಮನೆಗೆ 7-8 ಬಾರಿ ಬೇಟಿ ನೀಡಿರುತ್ತೇನೆ. ನಾನು ಓದುತ್ತಿರುವಾಗ ಶ್ರೀನಿವಾಸಯ್ಯನ ಮನೆಗೆ ಬೇಟಿ ಕೊಟ್ಟಿಲ್ಲ. ಶ್ರೀನಿವಾಸಯ್ಯನ ಮನೆಗೆ ಯಾವಾಗ ಕೊನೆಯಲ್ಲಿ ಬೇಟಿ ಕೊಟ್ಟಿದ್ದೆ ಎಂದು ನೆನಪಿಲ್ಲ.

ಓದುವಾಗ ಒಂದು ಬಾರಿ ಬೇಟಿ ಕೊಟ್ಟಿದ್ದೆ. ನಾನು ಓದು ಮುಗಿಸಿ ಕೆಲಸಕ್ಕೆ ಹೋದ ನಂತರ ಶ್ರೀನಿವಾಸಯ್ಯನ ಮನೆಗೆ ಯಾವಾಗಲೂ ಬೇಟಿ ನೀಡಿಲ್ಲ.

ಶ್ರೀನಿವಾಸಯ್ಯನವರು ಉಪ ನೊಂದಣಿ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದರು ಎಂಬುದು ಗೊತ್ತಿತ್ತು ಆದರೆ ಪಕ್ಕಾ ಗೊತ್ತಿಲ್ಲ. ಶ್ರೀನಿವಾಸಯ್ಯನ ಮನೆ ಎಲ್ಲಿದೆ ಎಂಬ ವಿಳಾಸ ಗೊತ್ತಿಲ್ಲ ಆದರೆ ಮನೆ ನೋಡಿದ್ದೇನೆ ಕರೆದುಕೊಂಡು ಹೋಗುತ್ತೇನೆ.

ದಿ:06-11-1977 ರಲ್ಲಿ ಇಸ್ರೋದ ಕೆಲಸದ ನಿಮಿತ್ತ ಅಹಮದಾಬಾದ್ ನಲ್ಲಿ ಇದ್ದೆ. ದಿ:06-11-1977 ರಲ್ಲಿ ಶ್ರೀನಿವಾಸಯ್ಯನ ಮನೆಗೆ ಬೇಟಿ ನೀಡಿಲ್ಲ. ಶ್ರೀನಿವಾಸಯ್ಯ ಮತ್ತು ಅವರ ಹೆಂಡತಿ ಪಾರ್ವತಮ್ಮ ದಿ:06-11-1977 ಕ್ಕೂ ಮೊದಲು ದತ್ತು ಕೊಡುವ ವಿಚಾರವಾಗಿ ಮಾತನಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಶ್ರೀನಿವಾಸಯ್ಯ ಪಾರ್ವತಮ್ಮ ಮತ್ತು ವೆಂಕಟೇಶ್ ಅವರ ಹೆಂಡತಿ ಭಾಗ್ಯಲಕ್ಷ್ಮಿ ದಿ:06-11-1977 ರಲ್ಲೇ ಮೊದಲ ಬಾರಿಗೆ ನನ್ನ ಮುಂದೆ ಮಾತನಾಡಿರುತ್ತಾರೆ. ನಾನು ಚಿಂತಾವಣಿಗೆ ಬಂದಾಗ ಸುಮಾರು 10 ಗಂಟೆಯಾಗಿತ್ತು. ನಾನು ಬಂದ 2 ನಿಮಿಷಗಳಲ್ಲಿ ಈ ಬಗ್ಗೆ ಮಾತನಾಡಿರುತ್ತಾರೆ. ದಿ:06-11-1977 ರಲ್ಲಿ ಮೇಲೆ ಹೇಳಿದರು ಮಾತನಾಡಿಕೊಂಡಾಗ ನೆಂಟರಿಷ್ಟರು ಯಾರು ಎಂದು ಗೊತ್ತಿಲ್ಲ ಸುಮಾರು ಜನ ಇದ್ದರು. ಅ ದಿನ ನನಗೆ ಪರಿಚಯ ಇದ್ದವರು ಯರೂ ಇರಲಿಲ್ಲ. ನಾಗರಾಜು ಮತ್ತು ಸುಬ್ಬಾರೆಡ್ಡಿ ದಿ:06-11-1977 ರಂದೇ ಪರಿಚಯ ಆದರು ಆ ಮೊದಲು ನನಗೆ ಗೊತ್ತಿರಲಿಲ್ಲ. 1977 ರಿಂದ ಇದುವರೆಗೂ ನಾನು ಸುಬ್ಬಾರೆಡ್ಡಿ ಮತ್ತು ನಾಗರಾಜ್ ರೊಂದಿಗೆ ಮಾತನಾಡಿಲ್ಲ. ನನಗೆ ನಾಗರಾಜ

ಮತ್ತು ಸುಬ್ಬಾರೆಡ್ಡಿ ರವರನ್ನು ಶ್ರೀನಿವಾಸಯ್ಯ ಪರಿಚಯ ಮಾಡಿಕೊಟ್ಟರು. ನಾನು ಹೋದ ನಂತರ ಕಾರ್ಯ ಆರಂಭವಾಯಿತು. ಆ ದಿನ ದೇವರ ಪೂಜೆ ಮಾಡಿದರು ಮತ್ತೆ ಏನು ಪೂಜೆ ಮಾಡಲಿಲ್ಲ. ಆದಿನ ಅಣ್ಣ ತಮ್ಮಂನನ್ನು ನಿನ್ನ ಮಗು ನನಗೆ ದತ್ತು ಕೊಡು ಎಂದು ತಮ್ಮ ಒಪ್ಪಿಕೊಂಡರು. ಪೂಜೆ ಆಗುವ ಮೊದಲು ಮತ್ತು ಪೂಜೆ ಆದ ನಂತರ ಕೇಳಿರುತ್ತಾರೆ. ಪೂಜೆ ಆಗುವ ವೇಳೆಯಲ್ಲಿ ಮತ್ತು ಮುಗಿದ ನಂತರ ವೆಂಕಟೇಶಯ್ಯ ಮತ್ತು ಆತನ ಹೆಂಡತಿ ಮತ್ತು ಶ್ರೀನಿವಾಸಯ್ಯ ಮತ್ತು ಆತನ ಹೆಂಡತಿ ಮತ್ತು ನೆಟರಿಷ್ಟರು ಇದ್ದರು.

ನಾನು ಹೋಗುವಷ್ಟರಲ್ಲಿ ನಿಪಿ-1 ಸ್ಟಾಂಪ್ ಪೇಪರ್ ಅನ್ನು ತಂದಿದ್ದರು. ನಿಪಿ-1 ಅನ್ನು ಯಾರು ಎಲ್ಲಿಂದ ತಂದರು ನನಗೆ ಗೊತ್ತಿಲ್ಲ. ಮತ್ತೊಬ್ಬ ಸಾಕ್ಷಿದಾರರಾದ ನಾಗರಾಜು ರವರು ಏನು ಕೆಲಸ ಮಡುತ್ತಾರೆ ಎಂದು ಮಾಹಿತಿ ಪಡೆದಿಲ್ಲ. ಆ ವೇಳೆಯಲ್ಲಿ ವೆಂಕಟೇಶಯ್ಯ ಒಬ್ಬರು ಮಾತ್ರ ಸಹಿ ಮಾಡಿರುತ್ತಾರೆ. ಶ್ರೀನಿವಾಸಯ್ಯ ಮತ್ತು ಅವರ ಹೆಂಡತಿ ಸಹಿ ಮಾಡಿಲ್ಲ. ನಂಬಿಕೆಯಿಂದ ನಿಪಿ-1 ರ ಸ್ಟಾಂಪ್ ಪೇಪರ್ ಮೇಲೆ ಶ್ರೀನಿವಾಸಯ್ಯ ಮತ್ತು ಅವರ ಹೆಂಡತಿ ಸಹಿ ಮಾಡಿಲ್ಲ ಮತ್ತು ಕಾರಣ ಕೊಟ್ಟಿಲ್ಲ. ನಿಪಿ-1 ಕ್ಕೆ ಪುರುಷರು ಸಹಿ ಮಾಡಿದರೆ ಮಾತ್ರ ಸಾಕು ಮಹಿಳೆಯರು ಬೇಕಾಗಿರುವುದು ಎಂದು ಅವರು ಅಂದುಕೊಂಡಿರುತ್ತಾರೆ ಎಂದು ನಾನು ತಿಳಿದುಕೊಂಡಿರುತ್ತೇನೆ. ನಾನು ನಿಪಿ-1 ರ ಪೇಪರ್ ನೋಡಿ ಸಹಿ ಮಾಡಿರುತ್ತೇನೆ.

ನಿಪಿ-1 ರ ಪೇಪರ್ ಅನ್ನು ಬೆಂಗಳೂರಿನಿಂದ ತಂದಿದ್ದು ಅದನ್ನು ನೋಡಿರುತ್ತೇನೆ. ಶ್ರೀನಿವಾಸಯ್ಯನವರು ಚಿಂತಾಮಣಿಯ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ಕೆಲಸ ಮಾಡುತ್ತಾರೆ ಅದನ್ನು ಯಾರು ಹೇಗೆ ತಂದರು ಎಂಬುದನ್ನು ನಾನು ಕೇಳಿಲ್ಲ. ನಿಪಿ-1 ರಲ್ಲಿ ಸ್ಟೇಟ್ ಹುಜೂರ್ ಟ್ರಜರಿ ಮತ್ತು ಬೆಂಗಳೂರು ಎಂಬ ದುಂಡನೆ ಸೀಲ್ ಅನ್ನು ಬೆಂಗಳೂರಿನ ಟ್ರಸರಿಯಲ್ಲಿ ಮಾಡಿರುತ್ತಾರೆ, ಅದರ ಒಳಗೆ ಇರುವ ದಿನಾಂಕ ಬದಲಾವಣೆಯಾಗಿದೆ ಅದನ್ನು ನೋಡಿದ್ದೀರಾ ಎಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-1 ರ ಹಿಂಬದಿಯಲ್ಲಿ ದಿನಾಂಕ ಮತ್ತು ಶ್ರೀನಿವಾಸಯ್ಯ ಸಹಿ ಬದಲಾವಣೆ ಇದೆ ಎಂದರೆ ಸರಿಯಾಗಿದೆ ಎಂದು ನುಡಿಯುತ್ತಾರೆ.

ಶ್ರೀನಿವಾಸಯ್ಯನವರು ಉಪ ನೊಂದಣಿ ಕಛೇರಿಯಲ್ಲಿ ಕೆಲಸಕ್ಕೆ ಇದ್ದರಿಂದ ಅವರು ದತ್ತು ಪತ್ರ ನೊಂದಣಿ ಮಾಡಿಸುವುದು ಅವಶ್ಯಕ ಎಂಬುದನ್ನು ತಿಳಿದು ನೊಂದಣಿ ಮಾಡಿಸುತ್ತಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದತ್ತು ಪತ್ರ ಆಗುವಾಗ ಅವರ ತಂದೆ ತಾಯಿಗಳು ಇಬ್ಬರೂ ಸಹಿ ಮಾಡಬೇಕು ಆ ಬಗ್ಗೆ ನಿಯಮ ಗೊತ್ತಾ ಎಂದರೆ ಸಾಕ್ಷಿಯು ನಾನು ಸಾಕ್ಷಿಯಾಗಿರುತ್ತೇನೆ ನಿಯಮ ತಿಳಿದುಕೊಂಡಿಲ್ಲ ಎಂದು ನುಡಿಯುತ್ತಾರೆ. ನನಗೂ ಮತ್ತು ವೆಂಕಟೇಶ್ ರವರಿಗೂ ನಾನು ಮಹಾರಾಷ್ಟ್ರದಲ್ಲಿ ಕೆಲಸ ಮಾಡುತ್ತಿದ್ದಾಗಿನಿಂದಲೂ ವಿಶ್ವಾಸ ಇತ್ತು ಎಂದರೆ ಸರಿ. ಶ್ರೀನಿವಾಸಯ್ಯನವರು ಉಪ ನೊಂದಣಿ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದರಿಂದ ಪತ್ರ ಬರಹಗಾರರು ಹೆಚ್ಚಿನ ಸಂಖ್ಯೆಯಲ್ಲಿ ಪರಿಚಯ ಇತ್ತು ಎಂದರೆ ಸರಿ. ನಾನು ಮತ್ತು ವೆಂಕಟೇಶ್ ರವರು ನಿಪಿ-1 ರ ಸ್ಟಾಂಪ್

ಪೇಪರ್ ಅನ್ನು ದಿನಾಂಕವನ್ನು ಹಿಂದಿನ ತಾರೀಖಿನ ದಿನಾಂಕವನ್ನು ಹಾಕಿ ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನನಗೆ 1971 ರಲ್ಲಿ ಮದುವೆಯಾಗಿದೆ. ನನ್ನ ಮದುವೆ ಮಾಡಿದ ಪುರೋಹಿತರ ಹೆಸರು ಗೊತ್ತಿಲ್ಲ. ನನ್ನ ಮಕ್ಕಳ ಮದುವೆ ಮಾಡಿದ ಪುರೋಹಿತರ ಹೆಸರು ಗೊತ್ತಿಲ್ಲ. ನನ್ನ ಮಕ್ಕಳ ಮದುವೆಯಾಗಿದ್ದು 2002 ರಲ್ಲಿ. ದತ್ತು ಆಗಿದೆ ಎನ್ನಲಾದ ದಿನಾಂಕದಂದು ಬಂದ ಪುರೋಹಿತರ ಹೆಸರನ್ನು ಆ ದಿನವೇ ತಿಳಿದುಕೊಂಡಿದ್ದೇನೆ ಅವರು ಮೊದಲು ನನಗೆ ಪರಿಚಯ ಇರಲಿಲ್ಲ. ನಂತರ ಅವರನ್ನು ನಾನು ಮಾತನಾಡಿಸಿಲ್ಲ ಆ ಪುರೋಹಿತರ ಹೆಸರು ಕಾಶೀನಾಥ್. ನಾನು ನನ್ನ ವೈಯುಕ್ತಿಕ ಡೈರಿಯಲ್ಲಿ ದಿಃ06-11-1977 ರಂದು ದತ್ತು ಮಾಡಿದ ಪುರೋಹಿತರ ಹೆಸರನ್ನು ನಾನು ಬರೆದುಕೊಂಡಿದ್ದೇನೆ. ಈ ಆ ವೈಯುಕ್ತಿಕ ಡೈರಿ ನನ್ನ ಬಳಿ ಇಲ್ಲ ಹೊರಟು ಹೋಗಿದೆ. ನನ್ನ ಮದುವೆ ನನ್ನ ಮಕ್ಕಳ ಮದುವೆ ಪುರೋಹಿತರ ಹೆಸರನ್ನು ನನ್ನ ವೈಯುಕ್ತಿಕ ಡೈರಿಯಲ್ಲಿ ಬರೆದುಕೊಂಡಿರಲಿಲ್ಲ. ನನ್ನ ಮಗನ ಮದುವೆ 2002 ರಲ್ಲಿ ಆಗಿದೆ ದಿನಾಂಕ ಹೇಳಲಾಗುವುದಿಲ್ಲ ನೆನಪಿಲ್ಲ. ನಾನು ದಿಃ06-11-1977 ರಂದು ಕಾರ್ಯದಲ್ಲಿ ಪಾಲ್ಗೊಂಡಿದ್ದೆ ಹಾಗಾಗಿ ನೆನಪಿದೆ ಹೇಳುತ್ತಿದ್ದೇನೆ ಎಂದು ನುಡಿಯುತ್ತಾರೆ. ನನಗೆ ನಿಪಿ-1 ರ ಬಗ್ಗೆ ಖುದ್ದು ನೆನಪಿಲ್ಲ. ನಿಪಿ-1 ಅನ್ನು ನೋಡಿ ಹೇಳುತ್ತಿದ್ದೇನೆ.

ನಿಪಿ-1 ಅನ್ನು 11-30 ಯಿಂದ 12-00 ಗಂಟೆ ಒಳಗೆ ಮುಗಿಸಿದ್ದೇವೆ. ಆ ವೇಳೆಯಲ್ಲಿ ಶ್ರೀನಿವಾಸಯ್ಯ ಮತ್ತು ಆತನ ನೆಂಟರಿಷ್ಟರು ಇದ್ದರು. ಒಟ್ಟು 15-20 ಜನ ಇದ್ದರು. ಅವರಲ್ಲಿ ಯಾರು ಸಹಿ ಹಾಕಿದರು ಎಂದು

ಹೇಳಲಾಗುವುದಿಲ್ಲ. ಯಾವ ಕಾರಣದಿಂದ ಸಹಿ ಹಾಕಲಿಲ್ಲ ಎಂದು ಗೊತ್ತಿಲ್ಲ. ದಿ:06-11-1977 ರಲ್ಲಿ ಯಾವುದೇ ದತ್ತು ಕಾರ್ಯ ಕ್ರಮ ಆಗಿಲ್ಲ ಈ ಕಾರಣದಿಂದ ನಿಪಿ-1 ಕ್ಕೆ ಶ್ರೀನಿವಾಸಯ್ಯ ಮತ್ತು ಆತನ ಹೆಂಡತಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನೀವು ಪ್ರಮಾಣ ಪತ್ರಿಕೆಯಲ್ಲಿ ಶಾಲೆಗೆ ಸೇರಿಸಿದ ಬಗ್ಗೆ ಹೇಳಿದ್ದು ಎಂದರೆ ಸಾಕ್ಷಿಯು ನಾನು ದತ್ತು ಪತ್ರ ಆದ ನಂತರ ಏನಾಗಿದೆ ಗೊತ್ತಿಲ್ಲ ನೋಡಿಲ್ಲ ಎಂದು ನುಡಿಯುತ್ತಾರೆ. ಶಾಲಾ ದಾಖಲಾತಿಗಳಲ್ಲಿ ಅವರ ಹೆಸರನ್ನು ಹೇಳಿ ಬರೆಸಿರುವ ಬಗ್ಗೆ ಗೊತ್ತು ಈ ಬಗ್ಗೆ ಶ್ರೀನಿವಾಸಯ್ಯನವರು ನನಗೆ ಹೇಳಿರುತ್ತಾರೆ ಯಾವ ದಿನಾಂಕ ಹೇಳಿರುತ್ತಾರೆ ನೆನಪಿಲ್ಲ. ನಾನು ನನ್ನ ಪ್ರಮಾಣ ಪತ್ರಿಕೆಯಲ್ಲಿ ಏನು ಬರೆದಿದ್ದಾರೆ ಗೊತ್ತು. ಪಾರ್ವತಮ್ಮ ಮತ್ತು ಶ್ರೀನಿವಾಸಯ್ಯ ವಾದಿಯನ್ನು ತನ್ನ ಮಗಳಂತೆ ಹೇಳಿ ಶಾಲೆಗೆ ಸೇರಿಸಿ ದಾಖಲಾತಿಗಳಲ್ಲಿ ಬರೆಸಿದ್ದಾರೆ ಎಂಬುದನ್ನು ಕೇಳಿ ತಿಳಿದುಕೊಂಡಿರುತ್ತೇನೆ. ಆ ಬಗ್ಗೆ ನನಗೆ ಖುದ್ದು ಗೊತ್ತಿಲ್ಲ. ದಾಖಲಾತಿಯಲ್ಲಿ ಸೇರಿಸಿರುವ ಬಗ್ಗೆ ನಾನು ನೋಡಿಲ್ಲ.

ವಾದಿಯ ವಿವಾಹಕ್ಕೆ ನಾನು ಬಂದಿರಲಿಲ್ಲ ವಾದಿಯ ವಿವಾಹ ಚಿಂತಾಮಣಿಯಲ್ಲೇ ಆಗಿದೆ. ಯಾವ ಕಲ್ಯಾಣ ಮಂಟಪದಲ್ಲಿ ಆಗಿದೆ ಎಂದು ನನಗೆ ಗೊತ್ತಿಲ್ಲ. ವಾದಿಯ ವಿವಾಹವನ್ನು ಶ್ರೀನಿವಾಸಯ್ಯ ಮತ್ತು ಆತನ ಹೆಂಡತಿ ಮಾಡಿರುತ್ತಾರೆ ಎಂದು ಗೊತ್ತು ಆದರೆ ಖುದ್ದು ತಿಳಿದುಕೊಂಡಿಲ್ಲ. ಪಾರ್ವತಮ್ಮ ಎಲ್ಲಿ ತೀರಿಕೊಂಡರು ಗೊತ್ತಿಲ್ಲ 2012 ರಲ್ಲಿ ತೀರಿಕೊಂಡರು ಎಂದು ಮಾಹಿತಿ ಗೊತ್ತು. ಅವರ ಕಾರ್ಯಗಳನ್ನು ವಾದಿ ಮಾಡಿರುತ್ತಾರೆ ಎಂಬುದು ಗೊತ್ತು ಖುದ್ದು ಗೊತ್ತಿಲ್ಲ. ಗಂಡು ಮಕ್ಕಳು ಎಲ್ಲಾ ತಿಥಿ

ಕಾರ್ಯಗಳನ್ನು ಹಿಂದೂ ಸಂಪ್ರದಾಯದಂತೆ ಮಾಡುತ್ತಾರೆ ಎಂದರೆ ಗಂಡು ಮಕ್ಕಳು ಇಲ್ಲದೆ ಇದ್ದಾಗ ಹೆಣ್ಣು ಮಕ್ಕಳು ಮಾಡುತ್ತಾರೆ ಎಂದು ನುಡಿಯುತ್ತಾರೆ. ಪಾರ್ವತಮ್ಮ ಮತ್ತು ಶ್ರೀನಿವಾಸಯ್ಯನವರು ಪೋಷಣೆಯನ್ನು ವಾದಿ ಮಾಡಿರುತ್ತಾರೆ ಎಂದು ಮಾಹಿತಿ ತಿಳಿದುಕೊಂಡಿರುತ್ತೇನೆ ಖುದ್ದು ಗೊತ್ತಿಲ್ಲ. ವಾದಿಯ ತಂದೆ ನನಗೆ ಪರಿಚಯ ಆದ ಕಾರಣ ಅವರ ಹೇಳಿಕೆಯಂತೆ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದತ್ತು ಕಾರ್ಯಕ್ರಮ ಯಾವುದೂ ಆಗಿಲ್ಲ ಆದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

(ಶ್ರೀ. ಶಿವಕುಮಾರ ಜಿ.ಜೆ)
ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ

ದಿನಾಂಕಃ 07-09-2021 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಟಿ ಎನ್ ಎಸ್ ವಕೀಲರಿಂದ

ಟ್ಯಾಂಕ್ ಬಂಡ್ ರಸ್ತೆಯಲ್ಲಿ ನನಗೆ ಸ್ವಂತ ಮನೆ ಇದೆ ಸುಮಾರು 18-20 ವರ್ಷಗಳಿಂದ ವಾಸ ಇದ್ದೇನೆ. ಶ್ರೀನಿವಾಸಯ್ಯನ ಮನೆ ಟ್ಯಾಂಕ್ ಬಂಡ್ ರಸ್ತೆಯಲ್ಲಿ ಇದೆ. ನನ್ನ ಸ್ವಂತ ಊರು ಚೇಳೂರು. ನಾನು 1962 ರಿಂದ ಶಿಕ್ಷಕನಾಗಿ ಚಿಂತಾಮಣಿಯಲ್ಲಿ ಕೆಲಸ ಮಾಡುತ್ತಿದ್ದೆ. ವೆಂಕಟೇಶಯ್ಯನವರು ನನಗೆ ಮನೆ ಕಟ್ಟಿಕೊಂಡು ಚಿಂತಾಮಣಿಗೆ ಬಂದಾಗಿನಿಂದ ಪರಿಚಯ. ನನ್ನ ಮನೆ ಪಕ್ಕದಲ್ಲೇ ವೆಂಕಟೇಶಯ್ಯ ನವರ ಮನೆ. ಈಗ್ಗೆ 45-50 ವರ್ಷಗಳಿಂದ ಶ್ರೀನಿವಾಸಯ್ಯನವರು ಅಲ್ಲಿ ವಾಸ ಇದ್ದರು. ಶ್ರೀನಿವಾಸಯ್ಯ ಮತ್ತು ವೆಂಕಟೇಶಯ್ಯ ಎಂಬುವವರು ಇಬ್ಬರೂ ಉಪ ನೊಂದಣಿ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದರು. ವೆಂಕಟೇಶಯ್ಯ ನವರು ಉಪ ನೊಂದಣಿ ಕಛೇರಿಯಲ್ಲಿ ಪತ್ರಗಳನ್ನು ಬರೆದು ನೊಂದಣಿ ಮಾಡಿಸುತ್ತಿದ್ದರು. ಶ್ರೀನಿವಾಸಯ್ಯನವರು ಉಪ ನೊಂದಣಿ ಕಛೇರಿಯಲ್ಲಿ ಸರ್ಕಾರಿ ಕೆಲಸದಲ್ಲಿ ಇದ್ದರು. ವೆಂಕಟೇಶಯ್ಯನವರು ಪತ್ರ ಬರಹಗಾರರು ಅಲ್ಲ ಅವರು ಬೇರೆಯವರಿಂದ ಬರೆಸಿ ನೊಂದಣಿಗೆ ತರುತ್ತಿದ್ದರು. ವೆಂಕಟೇಶಯ್ಯನವರು ಸಾಯುವವರಗೂ ಇದೇ ರೀತಿ ಕೆಲಸ ಮಾಡುತ್ತಿದ್ದರು. ನಾನು ಚಿಂತಾಮಣಿಗೆ ಬಂದಾಗಿನಿಂದಲೂ ಅದೇ ಕೆಲಸ ಮಾಡುತ್ತಿದ್ದರು. ಮತ್ತು ನಮ್ಮ ಮನೆ ಪಕ್ಕದಲ್ಲಿ ವಾಸ ಇದ್ದರು. ಶ್ರೀನಿವಾಸಯ್ಯನವರೂ ನಮ್ಮ ಮನೆ

ಪಕ್ಕದಲ್ಲಿ ಇದ್ದರು. ಎರಡು ಮನೆಗಳು ಇದ್ದು ಅದರಲ್ಲಿ ಶ್ರೀನಿವಾಸಯ್ಯ ಮತ್ತು ವೆಂಕಟೇಶಯ್ಯ ಇಬ್ಬರೂ ಒಂದೊಂದು ಮನೆಯಲ್ಲಿ ವಾಸ ಇದ್ದರು. ವೆಂಕಟೇಶಯ್ಯನ ಹೆಂಡತಿ ಹೆಸರು ಭಾಗ್ಯಲಕ್ಷ್ಮಮ್ಮ ಅವರು ಚೆನ್ನಾಗಿ ಪರಿಚಯ. ಅವರೂ ಅವರೊಂದಿಗ ವಾಸ ಇದ್ದರು. ಭಾಗ್ಯ ಲಕ್ಷ್ಮಮ್ಮ ಈಗ ಊರಿನಲ್ಲಿ ಇಲ್ಲ.

1977 -78 ನೇ ಇಸ್ವಿಯಲ್ಲಿ ಶ್ರೀನಿವಾಸಯ್ಯನ ಮನೆಯಲ್ಲಿ ಕಾರ್ಯಕ್ರಮ ಆಯಿತು. ಅ ಕಾರ್ಯಕ್ರಮದಲ್ಲಿ ಆ ಪತ್ರ ಬರೆಸಿಕೊಂಡಿರುತ್ತಾರೆ ಕಾರ್ಯಕ್ರಮಕ್ಕೆ ಶ್ರೀನಿವಾಸಯ್ಯನ ಕುಟುಂಬದಿಂದ 10-15 ಜನ ಮತ್ತು ವೆಂಕಟೇಶಯ್ಯನವರ ಕುಟುಂಬದಿಂದಲೂ ಸಹ ನೆಂಟರಿಷ್ಟರು 10-15 ಜನ ಬಂದಿದ್ದರು. ದತ್ತು ಪತ್ರ ಆಗಿದೆ ಎನ್ನಲಾದ ದಿನಾಂಕದಂದೇ ಮೊದಲನೇ ಬಾರಿ ಮಾತುಕತೆಯಾಯಿತು. 11 ಗಂಟೆಗೆ ಕಾರ್ಯಕ್ರಮ ಆಯಿತು 12-30 ರಿಂದ 1-00 ಗಂಟೆಗೆ ದತ್ತು ಮಾತುಕತೆಯಾಯಿತು. 11 ಗಂಟೆಯಿಂದ 12 ಗಂಟೆಗೆ ಪೂಜೆ ಆಯಿತು. 12 ಗಂಟೆಗೆ ಪತ್ರ ಬರೆದಿರುತ್ತಾರೆ. ಆ ನಂತರ 12 ಗಂಟೆಯಿಂದ 2 ಗಂಟೆಯವರೆಗೆ ಮಾತುಕತೆಯಾಗಿರುತ್ತದೆ. ಶ್ರೀನಿವಾಸಯ್ಯ ನ ಆತನ ಹೆಂಡತಿ ಮತ್ತು ವೆಂಕಟೇಶಯ್ಯ ಮತ್ತು ಆತನ ಹೆಂಡತಿ ಸಹಿ ಮಾಡಿರುತ್ತಾರೆ. ನಾನು ಸಹಿ ಹಾಕುವ ಮೊದಲು ಅವರು ಸಹಿ ಹಾಕಿರುತ್ತಾರೆ ನಂತರ ಅವರ ಸಹಿಗಳನ್ನು ನೋಡಿ ಹಾಕಿರುತ್ತೇನೆ. ಸಾಕ್ಷಿಗೆ ನಿಪಿ-1 ರ ಪತ್ರ ತೋರಿಸಿ ಶ್ರೀನಿವಾಸಯ್ಯ ಮತ್ತು ಆತನ ಹೆಂಡತಿಯ ಸಹಿಯನ್ನು ತೋರಿಸಲು ಹೇಳಿದ್ದು ಸಾಕ್ಷಿಯು ನಿಪಿ-1 ರಲ್ಲಿ ಇರುವ ನಿಪಿ-1 (ಎ) ಸಹಿಯನ್ನು ನೋಡಿ ಅದು ಶ್ರೀನಿವಾಸಯ್ಯನ ಸಹಿ ಎಂದು ನುಡಿಯುತ್ತಾರೆ. ನಿಪಿ-1 ರಲ್ಲಿ ಶ್ರೀನಿವಾಸಯ್ಯನ ಹೆಂಡತಿ ಸಹಿ ಇದೆ. ಸಾಕ್ಷಿಯು ನಿಪಿ-1 ರಲ್ಲಿ ದತ್ತು ಕೊಟ್ಟಿರುವವರು ಎಂದು ಬರೆದಿರುವುದನ್ನು ನೋಡಿ ಅದೇ ಶ್ರೀನಿವಾಸಯ್ಯನ

ಹೆಂಡತಿಯ ರುಜು ಎಂದು ನುಡಿಯುತ್ತಾರೆ. ನನ್ನ ಮುಂದೆ ವೆಂಕಟೇಶಯ್ಯನ ಹೆಂಡತಿ ಸಹಿ ರುಜು ಹಾಕಿರುತ್ತಾರೆ. ಸಾಕ್ಷಿಯು ಪುನಃ ದತ್ತು ಕೊಟ್ಟಿರುವುದನ್ನು ನೋಡಿ ಅದೇ ವೆಂಕಟೇಶಯ್ಯನ ಹೆಂಡತಿಯ ಸಹಿ ಎಂದು ನುಡಿಯುತ್ತಾರೆ.

ನಾಗರಾಜು ನಮ್ಮ ಏರಿಯಾದಲ್ಲಿ ವಾಸ ಇದ್ದಾರೆ ಅವರ ಪರಿಚಯ ಇದೆ. ಚೌಡಪ್ಪ ಈ ದಿನ ನ್ಯಾಯಾಲಯಕ್ಕೆ ಬಂದ ನಂತರ ಪರಿಚಯ ಆಗಿರುತ್ತದೆ. ಆ ಮೊದಲು ನಾನು ಅವರನ್ನು ನೋಡಿಯೇ ಇಲ್ಲ. ನಾನು ರುಜು ಹಾಕುವ ಮೊದಲು ಚೌಡಪ್ಪ ಎಂಬುವರು ಸಹಿ ಹಾಕಿದ್ದರು ಬೇರೆ ಯಾರೂ ಹಾಕಿರಲಿಲ್ಲ. ನಾನು ನಿಪಿ-1 ಕ್ಕೆ ದಾವಾ ಹಾಕಿದ ನಂತರ ಸಹಿ ಮಾಡಿರುತ್ತೇನೆ. ಮಂಜುಳ ಮತ್ತು ಮಂಜುಳ ಗಂಡ ಇಬ್ಬರೂ ಬಂದು ನನ್ನ ಸಹಿಯನ್ನು ನಿಪಿ-1 ಕ್ಕೆ ಪಡೆದಿರುತ್ತಾರೆ. ನನ್ನ ಪ್ರಮಾಣ ಪತ್ರಿಕೆಯನ್ನು ವಾದಿ ಮತ್ತು ವಾದಿಯ ವಕೀಲರು ಬರೆದು ಹಾಕಿರುತ್ತಾರೆ ಅದಕ್ಕೆ ಸಹಿ ಹಾಕಿರುತ್ತೇನೆ ಬೇರೆ ಏನೂ ಗೊತ್ತಿಲ್ಲ. ಮಂಜುಳಾ ರವರಿಗೆ ಸಹಾಯ ಮಾಡಲು ನಿಪಿ-1 ಅನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

(ಶ್ರೀ. ಶಿವಕುಮಾರ ಜಿ.ಜೆ)
ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ

ಪಿಡಬ್ಲ್ಯೂ5 ಓ.ಎಸ್.ನಂ.243/2017

ದಿನಾಂಕಃ 07-09-2021 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಟಿ ಎನ್ ಎಸ್ ವಕೀಲರಿಂದ

ನಾನು ಉಪ ನೊಂದಣಿ ಕಛೇರಿಯಲ್ಲಿ 1985 ರಿಂದ 1995 ರವರೆಗೆ ಕೆಲಸ ಮಾಡಿರುತ್ತೇನೆ. ನಾನು ಸ್ವಯಂ ಸೇವಕನಾಗಿ ಕೆಲಸ ಮಾಡಿರುತ್ತೇನೆ. ಶ್ರೀನಿವಾಸಯ್ಯನವರು ಯಾವ ವರ್ಷ ದಿಂದ ಯಾವ ವರ್ಷದ ವೆರಗೆ ಕೆಲಸ ಮಾಡಿದ್ದರು ಗೊತ್ತಿಲ್ಲ ಒಟ್ಟಾಗಿ ಕೆಲಸ ಮಾಡಿದ್ದರು. ಪಾರ್ವತಮ್ಮ ಮತ್ತು ಶ್ರೀನಿವಾಸಯ್ಯನವರು ವಾಸ ಇದ್ದ ಮನೆಯ 500 ಅಡಿ ಅಂತರದಲ್ಲಿ ನನ್ನ ಮನೆ ಇದೆ ಹಾಗಾಗಿ ಪರಿಚಯ. 2012 ರಲ್ಲಿ ಪಾರ್ವತಮ್ಮ ಅವರ ತಮ್ಮನೊಂದಿಗೆ ಕ್ರಯದ ಕರಾರು ಪತ್ರವನ್ನು ರದ್ದುಪಡಿಸಲು ಬಂದಿದ್ದರು. ಪಾರ್ವತಮ್ಮ ರದ್ದು ಪಡಿಸಲು ಬಂದಿದ್ದ ದಿನಾಂಕಂದು ಆರೋಗ್ಯವಾಗಿ ಮತ್ತು ಮಾನಸಿಕವಾಗಿ ಸದೃಢರಾಗಿದ್ದರು. ಅವರು ಯಾವ ಪತ್ರಗಳನ್ನು ರದ್ದು ಮಾಡಲು ಬಂದಿದ್ದಾರೆ ಎಂದು ಪರಿಶೀಲನೆ ಮಾಡಲು ಹೋಗಲಿಲ್ಲ. 2-3 ದಿನಗಳ ನಂತರ ಪಾರ್ವತಮ್ಮ ನಮ್ಮ ಮನೆಗೆ ಯಾವುದೋ ವಿಲ್ ಪತ್ರ ಆದ ಹಾಗೆ ಇದೆ ಎಂದು ಬಂದಿರುತ್ತಾರೆ ನಂತರ 4 ದಿನ ಬಿಟ್ಟು ಉಪ ನೊಂದಣಿ ಕಛೇರಿಗೆ ಬಂದು ನನ್ನನ್ನು ಕಂಡಿರುತ್ತಾರೆ. ನಾನು ವಿಲ್ ದಾಖಲಾತಿಗಳನ್ನು ನೋಡಿದಾಗ 1 ನೇ ಪ್ರತಿವಾದಿಗೆ ವಿಲ್ ಮಾಡಿದಂತೆ ಇತ್ತು. ಆ ದಿನ ನಾನು ಕ್ರಯ ಕರಾರು ಪತ್ರದ ರದ್ದಾಯಿತಿ ಪತ್ರ ಆದಿ ದಾಖಲಾತಿಯನ್ನು ಮತ್ತು ವಿಲ್ ನಾಮೆಯನ್ನು ಮಾತ್ರ ನೋಡಿರುತ್ತೇನೆ ಬೇರೆ ಯಾವ ದಾಖಲಾತಿಯನ್ನು ನೋಡಿಲ್ಲ. ನಿಪಿ-2 ಅನ್ನು ನಾನು ನೋಡಿಲ್ಲ.

ನಾನು ನಿಡಿ-1 ರ ವಿಲ್ ರದ್ದಾಯಿತಿ ಪತ್ರ ನೋಡಿಲ್ಲ. ನಿಡಿ-2 ರ ಪತ್ರವನ್ನು ಪಾರ್ವತಮ್ಮನವರು ನನಗೆ ಪ್ರತಿ ತೆಗೆದುಕೊಂಡು ತೋರಿಸಿರುತ್ತಾರೆ.. ನಾನು ಯಾವುದನ್ನೂ ಓದಿಲ್ಲ ಕೇವಲ ಪ್ರತಿಗಳನ್ನು ಪಾರ್ವತಮ್ಮ ತೆಗೆದುಕೊಂಡು ಹೋದರು. ನಿಡಿ-2 ರಲ್ಲಿ ಇರುವ ಫೋಟೋಗಳನ್ನು ನೋಡಿ ಗುರುತಿಸಿ ಇವರೇ ಪಾರ್ವತಮ್ಮ ಎಂದು ನುಡಿಯುತ್ತಾರೆ. ನನ್ನ ಬಳಿ ಪಾರ್ವತಮ್ಮ ಬಂದು ಮಾತನಾಡಿದಾಗ ಸ್ವಲ್ಪ ಸುಸ್ತಾಗಿದ್ದರು. ಮನಸ್ಸಿನಲ್ಲಿ ಆಘಾತ ಹೊರತುಪಡಿಸಿ ಬೇರೆ ಯಾವುದೇ ಖಾಯಿಲೆ ಇರಲಿಲ್ಲ. ವಿಲ್ ಪ್ರತಿಯನ್ನು ತೆಗೆದುಕೊಂಡಾಗ ಪಾರ್ವತಮ್ಮ ನನ್ನ ತಮ್ಮ ಎಡವಟ್ಟು ಮಾಡಿದ್ದಾನೆ ಎಂದು ಹೇಳಿದರು. ನಿಡಿ-2 ಅನ್ನು ಮೋಸ ಮಾಡಿ ಮಾಡಿದ್ದಾರೆ ಎಂಬುದಾಗಿ ನನಗೆ ಹೇಳಿದರು. ವಿಲ್ ಅನ್ನು ಮೋಸ ಮಾಡಿ ಮಾಡಿಕೊಂಡಾಗ ಅದನ್ನು ಯಾವಾಗ ಬೇಕಾದರೂ ರದ್ದು ಪಡಿಸಿಸುವ ಅವಕಾಶ ಇದೆ ಎಂದು ನನಗೆ ಗೊತ್ತು. ಈ ವಿಚಾರವನ್ನು ಪಾರ್ವತಮ್ಮ ನವರು ಕೇಳಲಿಲ್ಲ ನಾನು ಹೇಳಲಿಲ್ಲ. ಪಾರ್ವತಮ್ಮ ವಿಲ್ ಪ್ರತಿಯನ್ನು ತೆಗೆದುಕೊಂಡ ದಿನಾಂಕದಿಂದ 5-6 ತಿಂಗಳು ಬದುಕಿದ್ದರು. ಈ 5-6 ತಿಂಗಳಲ್ಲಿ ನನ್ನನ್ನು ಬೇಟಿಯಾಗಿಲ್ಲ. ನಿಡಿ-2 ರಲ್ಲಿ ಯಾರು ಯಾರು ಸಹಿ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ವಿಲ್ ಪತ್ರ ನೊಂದಣಿಯಾದಾಗ ಯಾರು ಉಪ ನೊಂದಣಾಧಿಕಾರಿಯಾಗಿದ್ದರು ಎಂದು ನನಗೆ ಗೊತ್ತಿಲ್ಲ. ನಿಡಿ 2 ರ ವಿಲ್ ಪತ್ರವನ್ನು ಪಾರ್ವತಮ್ಮ ಸಾಯುವವರೆಗೆ ನಾನು ಓದಿಲ್ಲ. ನಂತರ ಮಂಜುಳಾ (ವಾದಿ) ರವರು ಹೇಳಿರುತ್ತಾರೆ. ಆಗ ಪತ್ರವನ್ನು ಓದಿರುತ್ತೇನೆ.

ದಾಖಲಾತಿಯನ್ನು ನೊಂದಣಿ ಮಾಡುವಾಗ ಯಾರು ದಾಖಲಾತಿಯನ್ನು ಹಾಜರುಮಾಡುತ್ತಾರೋ ಅವರು ಅದನ್ನು ಓದಿ ಹೇಳಿರುತ್ತಾರೆ ಎಂದರೆ ಸರಿ. ಆ ವೇಳೆಯಲ್ಲಿ ಉಪ ನೊಂದಣಾಧಿಕಾರಿ ಅದನ್ನು ಓದುತ್ತಾರೆ ಎಂದರೆ ಸರಿ. ಪಾರ್ವತಮ್ಮ ವಿಲ್ ಮಾಡಿಸಿದ್ದಾರೆ ಎಂದು ಮಾತ್ರ ಹೇಳಿರುತ್ತಾರೆ ಎಷ್ಟು ಸಹಿಗಳು ಮಾಡಿರುತ್ತಾರೆ ಎಂದು ಹೇಳಿರುವುದಿಲ್ಲ. ವಿಲ್ ತನ್ನ ತಮ್ಮ ನ ಹೆಸರಿಗೆ ಮಾಡಿಸಿಕೊಂಡಿದ್ದಾನೆ ಎಂದು ಹೇಳಿರುತ್ತಾರೆ. ಅದಕ್ಕೂ ಮೊದಲು ವಿಲ್ ಅನ್ನು

ರದ್ದು ಪಡಿಸಿರುವ ಬಗ್ಗೆ ಹೇಳಿಲ್ಲ. ಯಾವ ರೀತಿ ಪಾರ್ವತಮ್ಮ ತಮ್ಮ ಪತ್ರವನ್ನು ಮಾಡಿಸಿಕೊಂಡಿದ್ದಾರೆ ಎಂದು ಹೇಳಿಲ್ಲ. ಪಾರ್ವತಮ್ಮ 4 ನೇ ತರಗತಿಯವರೆಗೆ ಓದಿದ್ದಾರೆ ಎಂದು ಹೇಳುತ್ತಿದ್ದರು ಕನ್ನಡ ಓದಲು ಬರೆಯಲು ಸುಮಾರು ಬರುತ್ತಿತ್ತು ಎಂದು ಹೇಳಿದ್ದರು. ಪಾರ್ವತಮ್ಮ ಚಿಂತಾಮಣಿಯಲ್ಲೆ ತೀರಿಕೊಂಡಿರುತ್ತಾರೆ. ವಾದಿಯು ಪಾರ್ವತಮ್ಮ ತೀರಿಕೊಂಡ ಮಾರನೇ ದಿನ ಬಂದಿರುತ್ತಾರೆ. ವಾದಿಯು ಬಂದಾಗ ಗೊತ್ತಾಗಿರಲಿಲ್ಲ ವಾದಿ ಬಂದು ಹೋದ ಎರಡು ವರ್ಷಗಳ ನಂತರ ಗೊತ್ತಾಯಿತು.

ಮಂಜುಳಾ ರವರು ನನಗೆ ಯಾವ ಪತ್ರವನ್ನು ತೋರಿಸಿಲ್ಲ. ಮಂಜುಳಾ ಪರವಾಗಿ ನಾನು ಉಪ ನೊಂದಣಾಧಿಕಾರಿ ರವರ ಮುಂದೆ ಹೇಳಿಕೆ ನೀಡಿಲ್ಲ. ಮಂಜುಳಾ ರವರು ವಿಲ್ ಮಾಡಿಕೊಂಡಿರುವ ವಿಚಾರ ನನಗೆ ಗೊತ್ತಿಲ್ಲ. ಪಾರ್ವತಮ್ಮ ಅವರ ತಮ್ಮನಿಗೆ ಸ್ವ ಇಚ್ಚೆಯಿಂದ ವಿಲ್ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ಪಾರ್ತಮ್ಮನಿಗೆ ಮಕ್ಕಳು ಇಲ್ಲದ ಕಾರಣ ಅವರ ತಮ್ಮನೇ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ವೆಂಕಟೇಶಯ್ಯ ಮತ್ತು ಭಾಗ್ಯಲಕ್ಷ್ಮಿ ನನಗೆ ಚಿಕ್ಕವನಿಂದ ಪರಿಚಯ. ವೆಂಕಟೇಶಯ್ಯನವರು ಮಹಾರಾಷ್ಟ್ರದಲ್ಲಿ ಕೆಲಸ ಮಾಡುತ್ತಿದ್ದಾಗ ಅಲ್ಲಿ ಇದ್ದರು ನಂತರ ಚಿಂತಾಮಣಿಗೆ ಬಂದರು, ಚಿಂತಾಮಣಿಗೆ ಯಾವಾಗ ಬಂದರು ಗೊತ್ತಿಲ್ಲ 2012 ರಿಂದ ಚಿಂತಾಮಣಿಯಲ್ಲಿ ಇದ್ದಾರೆ.

ದಿಃ06-11-1977 ರಂದು ದತ್ತು ಪತ್ರ ಆಗಿದೆ. ದತ್ತು ಪತ್ರ ಆದಾಗ ಶ್ರೀನಿವಾಸಯ್ಯ ಮತ್ತು ಆತನ ನೆಂಟರಿಷ್ಟರು ಇದ್ದರು ಅವರು ಯಾರು ಎಂದು ಪರಿಚಯ ಇಲ್ಲ. ವೆಂಕಟೇಶಯ್ಯ ಅವರ ಹೆಂಡತಿ ಭಾಗ್ಯಲಕ್ಷ್ಮಿ ಇದ್ದರು ಅವರ ನೆಂಟರಿಷ್ಟರು ಇದ್ದರು ಅವರು ಯಾರು ಎಂದು ಗೊತ್ತಿಲ್ಲ. 1977 ರಲ್ಲಿ ನನಗೆ 16 ವರ್ಷ ಆ ವೇಳೆಯಲ್ಲಿ ನಾನು ಎಸ್ ಎಸ್ ಎಲ್ ಸಿ ಮುಗಿಸಿ ಕಾಲೇಜಿಗೆ ಹೋಗಿದ್ದೆ. ದತ್ತು ಪತ್ರಕ್ಕೆ ವೆಂಕಟೇಶಯ್ಯ ಅವರ ಹೆಂಡತಿ ಶ್ರೀನಿವಾಸಯ್ಯ ಅವರ ಹೆಂಡತಿ ಯಾರು ಸಹಿ ಹಾಕಿದರು ಎಂದರೆ ಅಲ್ಲಿ ಯಾರೂ ಇರಲಿಲ್ಲ ಹೇಗೆ ಹಾಕಿದರು ಎಂದು ನುಡಿಯುತ್ತಾರೆ. ದತ್ತು ಪತ್ರಕ್ಕೆ ನಿಮ್ಮ ಸಮಕ್ಷಮ ಯಾರು

ಸಹಿ ಹಾಕಿದರು ಎಂದರೆ ಸಾಕ್ಷಿಯು ನಾನು ಅ ಪತ್ರ ನೋಡಿಯೇ ಇಲ್ಲ ನಮ್ಮ ಮನೆಗ ಬಂದು ತೋರಿಸಿದಾಗ ನನಗೆ ಗೊತ್ತಾಗಿರುತ್ತದೆ. ನಾನು ದತ್ತು ಪತ್ರವನ್ನು ಪೂಜಾ ಕಾರ್ಯಕ್ರಮ ಬಟ್ಟರು ಮಾಡಿದಾಗ ನೋಡಿದ್ದೆ ಆ ದಿನ ವೆಂಕಟೇಶಯ್ಯ ಬರೆದು ಸಹಿ ಹಾಕಿಕೊಟ್ಟರು. ದತ್ತು ಪತ್ರಕ್ಕೆ ಶ್ರೀನಿವಾಸಯ್ಯ ಮತ್ತು ಆತನ ಹೆಂಡತಿ ಸಹಿ ಹಾಕಿಲ್ಲ. ಯಾವ ಕಾರಣಕ್ಕಾಗಿ ಅವರು ಸಹಿ ಹಾಕಿಲ್ಲ ಎಂದು ನನಗೆ ಗೊತ್ತಿಲ್ಲ. ವೆಂಕಟೇಶಯ್ಯನ ಹೆಂಡತಿ ಸಹಿ ಹಾಕಲಿಲ್ಲ. ನನ್ನ ಮುಂದೆ ವೆಂಕಟೇಶಯ್ಯ ಮಾತ್ರ ಸಹಿ ಹಾಕಿರುತ್ತಾರೆ ಬೇರೆ ಯಾರೂ ಹಾಕಲಿಲ್ಲ ನಾನು ಸಹಿ ಹಾಕಿದಾಗ ಸಮಯ 10 ರಿಂದ 12 ಗಂಟೆಯಾಗಿತ್ತು. 10 ರಿಂದ 12 ಗಂಟೆಯವರೆಗ ಪೂಜೆ ನಡೆಯುತ್ತಿತ್ತು.

ದತ್ತು ಮಾತುಕತೆ ಪೂಜೆಗಿಂತ ಮೊದಲೇ ನಡೆಯಿತು. ಸಮಯ 10 ರಿಂದ 11 ಗಂಟೆಯಾಗಿತ್ತು. ಪೂಜೆ ನಡೆಯುವಾಗಲೇ ಪತ್ರವನ್ನು ಬರೆದಿರುತ್ತಾರೆ. 1977 ರಲ್ಲಿ ಪತ್ರ ಎಲ್ಲಿ ತಂದರು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ದತ್ತು ಪತ್ರಕ್ಕೆ ಸಹಿ ಹಾಕುವಾಗ ನಾನು ಪತ್ರ ನೋಡಿಲ್ಲ ಮತ್ತು ಸಾಕ್ಷಿದಾರರನ್ನು ನೋಡಿಲ್ಲ. ನಾನು ದತ್ತು ಪತ್ರವನ್ನು ಮೊದಲ ಬಾರಿಗೆ 2-3 ವರ್ಷಗಳ ಹಿಂದೆ ನೋಡಿರುತ್ತೇನೆ. ನನಗೆ ವಾದಿಯ ಗಂಡ ದತ್ತು ಪತ್ರವನ್ನು ಪೋಸ್ಟ್ ಮಾಡಿರುತ್ತಾರೆ. ಆ ವೇಳೆಯಲ್ಲಿ ಪತ್ರವನ್ನು ಓದಿರುತ್ತೇನೆ ಮರೆತುಹೋಗಿದೆ.ಆ ದಿನ ಬಂದಿದ್ದ ಶಾಸ್ತ್ರಿಗಳು ವೆಂಕಟೇಶಯ್ಯ ಶಾಸ್ತ್ರಿ ಅವರು ಶಿಡ್ಲಘಟ್ಟದವರು. ಅಲ್ಲಿ ವೆಂಕಟೇಶ್ ಶಾಸ್ತ್ರಿ ಎಂದು ಯಾರೋ ಅಂದುಕೊಳ್ಳುತ್ತಿದ್ದರು ಮತ್ತು ಇದುವರೆಗೂ ನೋಡಿಲ್ಲ. ನನಗೆ ಮದುವೆ ಮಾಡಿದ ಶಾಸ್ತ್ರಿ ಗೊತ್ತಿಲ್ಲ. ನಾನು ದತ್ತು ಪತ್ರವನ್ನು ನನ್ನ ಸಮಕ್ಷಮ ಬರೆದರು ಎಂದು ವಕೀಲರಿಗೆ ಹೇಳಿ ಪ್ರಮಾಣ ಪತ್ರ ಬರೆಸಿಲ್ಲ. ವಾದಿಯು ಶಾಲಾ ದಾಖಲಾತಿಗಳಲ್ಲಿ ಶ್ರೀನಿವಾಸಯ್ಯ ತನ್ನ ದತ್ತು ಮಗಳು ಎಂಬುದಾಗಿ ಬರೆಸಿದ್ದನ್ನು ನೋಡಿಲ್ಲ ಅದರ ವಿಚಾರ ಗೊತ್ತಿಲ್ಲ. ಈ ವಿಚಾರವನ್ನು ನಾನು ನಮ್ಮ ವಕೀಲರಿಗೆ ಹೇಳಿ ಬರೆಸಿಲ್ಲ. ನಾನು ಹೇಳಿದಂತೆ ವಕೀಲರು ಬರೆದಿರುತ್ತಾರೆ ಅದರಲ್ಲಿ ಏನು ಬರೆದಿರುತ್ತಾರೆ ಎಂದು ಗೊತ್ತಿದೆ. ದತ್ತು ಪತ್ರಕ್ಕೆ

ಯಾರು ಸಾಕ್ಷಿದಾರರು ಹಾಕಿದರು ಎಂದು ನಾನು ನೋಡಿಲ್ಲ ನಾನು ನಮ್ಮ ವಕೀಲರಿಗೆ ಹೇಳಿಲ್ಲ. ಪಾರ್ವತಮ್ಮ 2012 ರಲ್ಲಿ ತೀರಿಕೊಂಡಿರುತ್ತಾರೆ ದಿನಾಂಕ ನೆನಪಿಲ್ಲ. ಪಾರ್ವತಮ್ಮ ಮೊದಲು ಆರೋಗ್ಯವಾಗಿ ಇದ್ದರು ಸಾಯುವ 4-5 ತಿಂಗಳು ಅನಾರೋಗ್ಯವಾಗಿ ಇದ್ದರು. ಅನಾರೋಗ್ಯ ಇದ್ದ ಬಗ್ಗೆ ಯಾವುದೇ ದಾಖಲಾತಿಗಳು ಇಲ್ಲ. ನಾನು ವಾದಿಯ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪಾರ್ವತಮ್ಮ ಬದುಕಿದ್ದಾಗ ಬೇಟಿಯಾಗಿಲ್ಲ ನಾನು ನೋಡಿಲ್ಲ ನನಗೆ ಅವರ ತಮ್ಮ ಮೋಸ ಮಾಡಿದ್ದಾರೆ ಎಂದು ಹೇಳಿಲ್ಲ ಎಂದರೆ ಸರಿಯಲ್ಲ. ಪಾರ್ವತಮ್ಮ ತನ್ನ ತಮ್ಮ ಹೀಗೆ ಮಾಡಿದ್ದಾನೆ ಎಂದು ಹೇಳಿದ ದಿನ ಬಿಟ್ಟು ಬೇರೆ ದಿನ ಹೇಳಿಲ್ಲ ಎಂದರೆ ಸರಿ. ಮೊದಲು ಆಗಿದ್ದ ವಿಲ್ ಅನ್ನು ರದ್ದುಪಡಿಸಿದ ಬಗ್ಗೆ ಪಾರ್ವತಮ್ಮ ಹೇಳಿದ್ದಾರೆ. ಅದನ್ನು ಯಾವ ಕಾರಣಕ್ಕೆ ರದ್ದು ಪಡಿಸಿರುತ್ತಾರೆ ಎಂಬ ವಿಚಾರ ಹೇಳಿಲ್ಲ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

(ಶ್ರೀ. ಶಿವಕುಮಾರ ಜಿ.ಜೆ)
ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ